ಅಂಡ್ ಮೈನರ್ ಇರಿಗೇಷನ್ ಎರಡನ್ನು ನಿರ್ವಹಿಸುತ್ತಿದ್ದೀರಿ. ಅಟ್ ಲೀಸ್ಟ್ ಅಂಥ ಮೇಜರ್ ಟ್ಯಾಂಕ್ ಜಿಲ್ಲೆಯಲ್ಲಿ ಎಲ್ಲೆಲ್ಲಿ ಕೆನಾಲ್ ಬೆಡ್ ಕೆಳಗೆ ಬರುತ್ತವೆ. ಅವುಗಳಿಗೆ ಮಿನಿಮಮ್ ಆದರೂ ನೀರು ತುಂಬಿಸಿಕೊಡುವಂಥದ್ದನ್ನು ಮಾಡಬೇಕು. ಎಲ್ಲಾದರೂ ಒಂದೆರಡು ಕೆನಾಲ್ ಬೆಡ್ ಮೇಲೆ ಇರತಕ್ಕವು ಮಿನಿಮಮ್ ಆದರೂ ಸ್ವಲ್ಪ ಲಿಫ್ಟ್ ಮಾಡಿ ತ್ವರಿತವಾಗಿ ನೀರು ಕೊಡುವ ವ್ಯವಸ್ಥೆಯನ್ನು ತಾವು ಮಾಡಿದರೆ ನಿಜವಾಗಿಯೂ ಒಂದು ಜಿಲ್ಲೆಗೆ ಒಂದು ಉಪಕಾರವನ್ನು ಮಾಡಿದಂತಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಅವರೇನು ಪ್ರಸ್ತಾವನೆಯನ್ನು ಇಟ್ಟಿದ್ದಾರೆ. ಖಂಡಿತವಾಗಿಯೂ ಅದನ್ನು ಟೆಕ್ನಿಕಲ್ ಕಮಿಟಿ ಮುಂದಿಟ್ಟು ಎಲ್ಲಿ ಸಾಧ್ಯವಾಗುತ್ತದೋ ಅಲ್ಲಿ ಪರಿಶೀಲನೆ ಮಾಡಿ ಕ್ರಮವನ್ನು ಜರುಗಿಸುತ್ತೇವೆ.

ಭಟ್ಕಳದ ಕಡುವಿನ ಕಟ್ಟಾ ಡ್ಯಾಂ ಹೂಳೆತ್ತುವ ಕಾಮಗಾರಿ

224 (3104) ಶ್ರೀ ಶಿವಾನಂದ ನಾಯಕ್ (ಭಟ್ಕಳ): – ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳದ ಕಡುವಿನಕಟ್ಟಾ ಡ್ಯಾಂದಲ್ಲಿ ಮಣ್ಣು ತುಂಬಿದ್ದು ಹೂಳು ಎತ್ತುವ ಕಾಮಗಾರಿಯನ್ನು ಸರ್ಕಾರ ಯಾವಾಗ ಪ್ರಾರಂಭಿಸಲಾಗುವುದು;

ಆ) ಸದರಿ ಡ್ಯಾಂನ ನೀರು ಕೃಷಿಗೆ ಉಪಯೋಗಿಸುವ ಬದಲು ಕೃಷಿಯೇತರ ಚಟುವಟಿಕೆಗೆ (ಕುಡಿಯುವ ನೀರು) ಉಪಯೋಗಿಸ–ಲಾಗುತ್ತಿದೆಯೇ;

ಇ) ಇದರಿಂದ ರೈತರ ಹೊಲಗಳು ನೀರಿಲ್ಲದೆ ಬೆಳೆನಾಶವಾಗುತ್ತಿರುವ ಬಗ್ಗೆ ಸರ್ಕಾರ ಯಾವ ಯೋಜನೆ ರೂಪಿಸಿದೆ (ವಿವರ ಒದಗಿಸುವುದು);

ಈ) ಹೊನ್ನಾವರ ತಾಲ್ಲೂಕಿನ ಮಂಕಿ ಏತ ನೀರಾವರಿ ಯೋಜನೆಗೆ ಸರ್ಕಾರ ಮುಂಬರುವ ಆರ್ಥಿಕ ವರ್ಷದಲ್ಲಿ ಬಿಡುಗಡೆ ಮಾಡಲಿರುವ ಅನುದಾನವೆಷ್ಟು; ಈ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಸದರಿ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಆ) ಭಾಗಶಃ ಭಟ್ಕಳ ನಗರಕ್ಕೆ ಕುಡಿಯುವ ನೀರಿಗಾಗಿ ಉಪಯೋಗಿಸಲಾಗುತ್ತಿದೆ.

ಇ) ರೈತರ ಹೊಲಗಳು ನೀರಿಲ್ಲದೇ ಬೆಳೆ ನಾಶವಾಗುತ್ತಿರುವ ಬಗ್ಗೆ ಯಾವುದೇ ವರದಿ ಬಂದಿಲ್ಲ.

ಈ) ಮಂಕಿ ಏತ ನೀರಾವರಿ ಯೋಜನೆ ಸಚಿವ ಉಪ ಸಂಪುಟ ಸಮಿತಿ (ನಬಾರ್ಡ್) ನಿಂದ ರೂ. 100.00 ಲಕ್ಷಗಳಿಗೆ ಅನುಮೋದಿಸಲ್ಪಟ್ಟಿದೆ. ವಿವರವಾದ ಅಂದಾಜು ಪಟ್ಟಿಯನ್ನು ತಯಾರಿಸಿ ತಾಂತ್ರಿಕ ಸಮಕ್ಷತೆ ಮತ್ತು ಆರ್ಥಿಕ ಶಕ್ಯತೆಯನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಶಿವಾನಂದ ನಾಯಕ್ (ಭಟ್ಕಳ): -- ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಉತ್ತರ ಸರಿಯಾಗಿಲ್ಲ. ಇಲಾಖೆ ಮೂಲ ಉದ್ದೇಶವನ್ನೇ ಮರೆತ ಹಾಗೆ ಇದೆ. 1965ರಲ್ಲಿ ಭಟ್ಕಳದಲ್ಲಿ ಕಡುವಿನಕಟ್ಟಾ ಬಾಂದಾರವನ್ನು ನಿರ್ಮಿಸಲಾಯಿತು. ಭಟ್ಕಳದ ತಾಲ್ಲೂಕಿನಲ್ಲಿರುವ ಏಕೈಕ ನದಿ. ಇದರ ಮುಖ್ಯ ಉದ್ದೇಶ ರೈತರಿಗಾಗಿ ಇದನ್ನು ನಿರ್ಮಿಸಿರುವುದು. ಮತ್ತು ಏಳೂವರೆ ಕಿಲೋಮಿಟರ್ ಉದ್ದದ ಕಾಲುವೆ ಸಹಾ ಇದೆ. ಒಂದು ಸಾವಿರ ಎಕರೆ ಭೂಮಿಯಲ್ಲಿ ನೀರಾವರಿಯನ್ನು ಪ್ರತಿ ವರ್ಷ ಮಾಡುತ್ತಿದ್ದರು. ಈಗ ಪರಿಸ್ಥಿತಿ ಏನಾಗಿದೆ ಎಂದರೆ ಪ್ರತಿ 80ರಷ್ಟು ಭಾಗ ಹೂಳು ತುಂಬಿದೆ. ಕುಡಿಯುವ ನೀರಿಗಾಗಿ ಮಾತ್ರ ಬಳಸಿಕೊಳ್ಳುತ್ತಿರುವುದು ಬಿಟ್ಟರೆ ಪ್ರತಿವರ್ಷ ರೈತರ ಹೊಲವನ್ನು ಉಳುತ್ತಾರೆ. ಬೀಜವನ್ನು ಬಿತ್ತುತ್ತಾರೆ. ಮಧ್ಯದಲ್ಲಿ ನೀರಿನ ಕೊರತೆಯಾಗಿ ಬೆಳೆ ಹಾನಿಯಾಗುತ್ತಿದೆ. ಇದು ಇಲಾಖೆಯ ಗಮನಕ್ಕೆ ಬರಲಿಲ್ಲ ಎಂದು ಹೇಳುತ್ತಿದ್ದಾರೆ. ಇಲಾಖೆಗೆ ನಾನು ಆಗಲೀ ಲಿಖಿತವಾಗಿ ಪತ್ರವನ್ನೂ ಕೊಟ್ಟಿದ್ದೇನೆ. ಮಾನ್ಯ ಸಚಿವರಿಗೂ ಸಹಾ ಕೊಟ್ಟಿದ್ದೇನೆ. ಈ ಕಾಲುವೆ ಎಲ್ಲಾ ಭಾಗ ಒಡೆದುಹೋಗಿದೆ. ಮತ್ತು ಬಾಂದಾರದಲ್ಲಿ ಪೂರ್ತಿಹೂಳು ತುಂಬಿದೆ. ಆದರೆ ಹೂಳನ್ನು ಎತ್ತಿ ಮತ್ತೆ ಕಾಲುವೆಯನ್ನು ರಿಪೇರಿ ಮಾಡಿಕೊಟ್ಟರೆ ಆ ರೈತರಿಗೆ ಆ ಮೂಲ ಉದ್ದೇಶ ಈಡೇರುವುದಕ್ಕೆ ಸಾಧ್ಯ ಇದೆ. ಮತ್ತು ಆ ರೈತರ ಬೆಳೆಯನ್ನು ಉಳಿಸುವುದಕ್ಕೆ ಸಾಧ್ಯವಾಗುತ್ತದೆ. ಮುಖ್ಯ ಕುಡಿಯುವ ನೀರಿಗಾಗಿ ಆ ಉದ್ದೇಶಕ್ಕಾಗಿ ಆ ಬಾಂದಾರವನ್ನು ನಿರ್ಮಿಸಿದ್ದಲ್ಲ. ಮತ್ತು ಕುಡಿಯುವ ನೀರಿಗಾಗಿ ಪರ್ಯಾಯವಾಗಿ ಬಾಂದಾರನ್ನು ನಿರ್ಮಿಸುವುದಕ್ಕೆ ವ್ಯವಸ್ಥೆ ಕೂಡ ಇದೆ. ಆ ರೀತಿ ಚಿಂತನೆ ಮಾಡಬೇಕಾಗುತ್ತದೆ ಮತ್ತು ರೈತರ ಪರವಾಗಿರುವ ಸರ್ಕಾರ ಮತ್ತು ರೈತರ ಉದ್ದೇಶಕ್ಕಾಗಿ ನಿರ್ಮಿಸಿರುವ ಬಾಂದಾರನ್ನು ರೈತರಿಗೆ ಒದಗಿಸಿಕೊಡಬೇಕು ಎಂದು ಮಾನ್ಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅದರ ಜೊತೆಗೆ ಮತ್ತೊಂದು ವಿಷಯವನ್ನು ನಾನು ಕೇಳಿದ್ದೆ. ಮಂಕಿ ಏತ ನೀರಾವರಿ ಯೋಜನೆ ಬಗ್ಗೆ. ಇದು 1976ರಲ್ಲಿ ಇದು ಸರ್ವೆಯಾಗಿತ್ತು. ಚಿಕ್ಕಾ ಕಾಲದಲ್ಲಿ ಇದು ಸರ್ವೆಯಾಗಿತ್ತು. ಇದು 96ರ ಬಜೆಟ್‌ನಲ್ಲಿ ಸೇರಿತ್ತು. 97ರಲ್ಲಿ ಬಜೆಟ್‌ನಲ್ಲಿ ಮೂರನೇ ಒಂದು ಭಾಗ ಗ್ರಾಂಟ್ಸ್ ಸಹಾ ಮಂಜೂರಾಗಿತ್ತು. ಆದರೆ ಅದು ಅಲ್ಲಿಗೆ ನಿಂತು ಹೋಗಿತ್ತು. ತಾವು ಈಗ ಅದನ್ನು ಕೈಗೆತ್ತಿಕೊಳ್ಳುತ್ತೇನೆಂದು ಹೇಳಿದ್ದೀರಿ. ಇದು ಅತೀ ಅಗತ್ಯ ಇದೆ ಮತ್ತು ಮೂರು ಪಂಚಾಯಿತಿಯಲ್ಲಿ ಎರಡು ಸಾವಿರ ಎಕರೆ ನೀರಾವರಿ ಮಾಡುವ ಯೋಜನೆ ಇದು. ಮತ್ತು ಅಲ್ಲಿ ಅಂತರಜಲ ಸಹಾ ಕುಸಿದುಹೋಗುತ್ತಿದೆ. ಪಕ್ಕದಲ್ಲಿ ಶರಾವತಿ ನದಿ ಇದ್ದರೂ ಸಹಾ ಆ ನದಿಯನ್ನು ನಾವು ಸದ್ಬಳಕೆ ಮಾಡಿಕೊಳ್ಳುತ್ತಿಲ್ಲ. ನಮ್ಮಲ್ಲಿ ವಿದ್ಯುತ್ ಉತ್ಪಾದನೆಗೆ ಮಾತ್ರ ನಮ್ಮ ಜಿಲ್ಲೆಯಲ್ಲಿರುವ ನದಿಯನ್ನು ಬಳಸಿಕೊಳ್ಳುತ್ತಿರುವುದು ಬಿಟ್ಟರೆ ಅಲ್ಲಿ ನೀರಾವರಿಗೆ ಯಾವುದೇ ರೀತಿ ಒತ್ತನ್ನು ಕೊಡಲಿಲ್ಲ. ಯಾವುದೇ ರೀತಿ ಏತ ನೀರಾವರಿ ಯೋಜನೆಗೂ ಒತ್ತನ್ನು ಕೊಡಲಿಲ್ಲ. ಇದು ಒಂದೇ ಒಂದು ಯೋಜನೆ ನಾವು ಕೇಳಿರುವುದು. ತಾವು ಯಾವತ್ತು ಈ ಸದನದಲ್ಲಿ ಮಾತೆತ್ತಿದರೆ ಕೃಷ್ಣ, ಕಾವೇರಿ ಬಗ್ಗೆ ಮಾತ್ರ ಮಾತನಾಡುತ್ತಾರೆ. ಕರಾವಳಿಯಲ್ಲಿ ನಾವು ಸಾಕಷ್ಟು ವಿದ್ಯುತ್ತನ್ನು ರಾಜ್ಯ, ರಾಷ್ಟ್ರಕ್ಕೆ

ಕೊಟ್ಟರೂ ಸಹಾ ನಮ್ಮ ನದಿಯನ್ನು ಸದ್ಬಳಕೆ ಮಾಡಿಕೊಂಡು ಅಲ್ಲಿರುವ ರೈತರಿಗೆ ಪೂರಕವಾದ ಯಾವುದೇ ಒಂದು ಯೋಜನೆ ತರಲಿಲ್ಲ. ದಯಮಾಡಿ ಅದಕ್ಕೆ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕು. ಈ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಭಟ್ಕಳದ ಕಡುವಿನಕಟ್ಟಾ ಡ್ಯಾಂ ಇದು ಹಳೆಯ ಒಂದು ಡ್ಯಾಂ. ಇದು ಸುಮಾರು 76 ಎಂಎಲ್‌ಡಿ ನೀರು ಬಳಕೆಯಾಗುತ್ತದೆ. ಈಗಾಗಲೇ ಸುಮಾರು 700 ಎಕರೆ ಇದರ ಕೆಳಗೆ ನೀರಾವರಿಯಾಗುತ್ತದೆ. ನಮಗೆ ಇರುವ ಮಾಹಿತಿ ಪ್ರಕಾರ 700 ಎಕರೆ ಅನ್ ಆಥರೈಸ್ಡ್ 300 ಎಕರೆ ಆಗಬಹುದು. ಹೀಗೆ ಆದರೆ ಅಚ್ಚುಕಟ್ಟು ಇರುವುದು 700 ಆದರೆ ಅಲ್ಲಿ ನಿಜವಾಗಿ ಮಾಡುವುದು ಸಾವಿರ ಎಕರೆ. ಅಂದಾಗ ಮೂರು ನೂರು ಎಕರೆಗೆ ಹೆಚ್ಚಿನ ನೀರು ಹೋದ ಮೇಲೆ ಈ ಕಡೆ ಕುಡಿಯುವುದಕ್ಕೂ ನೀರು ಕಡಿಮೆ ಬೀಳುತ್ತದೆ. ಆಮೇಲೆ ಏನಾದರೂ ಸ್ವಲ್ಪ ಮಳೆ ಕಡಿಮೆಯಾದಾಗ ಏಳು ನೂರು ಎಕರೆ ನೋಟಿಫೈಡ್ ಏರಿಯಾ ಏನು ಇರುತ್ತದೋ ಅದಕ್ಕೂ ಕೂಡ ಕಡಿಮೆ ಬೀಳುತ್ತದೆ. ಅದಕ್ಕೆ ಈಗ ಇನ್ನು ಮುಂದೆ ಏನು ನಾವು ನೋಟಿಫೈಡ್ ಏರಿಯಾವನ್ನು ನಮೂದು ಮಾಡಿದ್ದೇವೆ. ಆ ನೋಟಿಫೈಡ್ ಏರಿಯಾಗೆ ಮೊದಲು ನೀರು ಸಿಗುವ ವ್ಯವಸ್ಥೆಯನ್ನು ಮಾಡಬೇಕು. ಅದಕ್ಕೊಂದು ಕಟ್ಟುನಿಟ್ಟಿನ ಡಿಸಿಪ್ಲಿನ್ಡ್ ಆಗಿ ಇಲಾಖೆಯವರಿಗೆ ಹೇಳುತ್ತಿದ್ದೇವೆ ಮತ್ತು ರಿವ್ಯೂವನ್ನು ಸಹಾ ಮಾಡುತ್ತಿದ್ದೇವೆ. ಮೊದಲು ನಾವೇನು ಮಾತು ಕೊಡುತ್ತೇವೆ. ಅದಕ್ಕೆ ಮೊದಲು ನೀರು ಪೂರೈಸಬೇಕು. ತದನಂತರ ಉಳಿದ ಕೆಲಸಕ್ಕೆ ಅದನ್ನು ಉಪಯೋಗ ಮಾಡಬೇಕೆಂದು ಹೇಳುತ್ತೇವೆ. ಈಗ ಅವರು ಕೇಳಿದ್ದೇನೆಂದರೆ ಇದಕ್ಕೆ ದುರಸ್ತಿ ಮಾಡಬೇಕು. ಹಣ ಇಲ್ಲ ಎನ್ನತಕ್ಕದ್ದು. ಈ ಬಜೆಟ್‌ನಲ್ಲಿ ಎಷ್ಟು ಹಣ ಇದಕ್ಕೆ ಲಭ್ಯವಾಗಬಹುದೋ ಅದನ್ನು ನಾನು ನೋಡುತ್ತೇನೆ. ಒಂದು ವೇಳೆ ಈಗ ಇರುವ ಬಜೆಟ್‌ನಲ್ಲಿ ಹಣ ಸಿಗದೇ ಹೋದರೆ ಮುಂದಿನ ವರ್ಷ ನಬಾರ್ಡ್‌ನಲ್ಲಿ ಅಥವಾ ಮತ್ತೆ ಯಾವುದಾದರೂ ಒಂದು ಯೋಜನೆ ನಮ್ಮಲ್ಲಿ ಬಂದರೆ ಆ ಯೋಜನೆ ಅಡಿಯಲ್ಲಿ ಅದನ್ನು ತೆಗೆದುಕೊಳ್ಳತಕ್ಕ ಪ್ರಯತ್ನವನ್ನು ಮಾಡುತ್ತೇವೆ. ಎರಡನೆಯದು, ಮಂಕಿ ಏತ ನೀರಾವರಿ ಬಗ್ಗೆ ಅವರು ಹೇಳಿದ್ದಾರೆ. ಇದಕ್ಕೆ ಈಗಾಗಲೇ ನಬಾರ್ಡ್‌ನಲ್ಲಿ ನಾವು ಒಂದು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆದರೆ ಸುಮಾರು ನನಗೆ ಮಾಹಿತಿ ಸಿಕ್ಕಿದ ಪ್ರಕಾರ 10–15 ಕಿಲೋಮೀಟರ್ ಫಾರೆಸ್ಟ್ ಒಳಗಿನಿಂದ ಅದು ಹೋಗಬೇಕು. ಅದಕ್ಕಾಗಿ ಅದು ಫಾರೆಸ್ಟ್‌ನಿಂದ ಒಳಗಿನಿಂದ ಹೋಗಬೇಕಾದರೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಅದಕ್ಕೆ ಪೈಪ್‌ಲೈನ್‌ನ್ನು ಒಯ್ಯಬೇಕು. ಅದಕ್ಕೆ ಅವರು ಪರ್ಮಿಷನನ್ನು ಕೊಡುತ್ತೇನೆ ಎನ್ನತಕ್ಕ ಮಾತನ್ನು ನಮ್ಮ ಅಧಿಕಾರಿಗಳು ಹೇಳಿದ್ದಾರೆ. ಒಂದು ವೇಳೆ ಅವರು ಪರ್ಮಿಷನನ್ನು ಕೊಟ್ಟರೆ ಈ ಮಂಕಿ ಏತ ನೀರಾವರಿ ಬಗ್ಗೆ ನಾವು ಕಾರ್ಯವನ್ನು ಮುಂದುವರೆಸಬಹುದು. ಒಂದು ವೇಳೆ ಫಾರೆಸ್ಟ್ ಎನ್‌ವಿರಾನ್‌ಮೆಂಟ್ ಇಲಾಖೆಯ ಕ್ಲಿಯರೆನ್ಸ್ ಸಿಗದೇ ಹೋದರೆ ಈ ಕಾರ್ಯ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ

ಆಗುವುದಿಲ್ಲ. ಬೇಕಾದರೆ ಈ ಹಣವನ್ನು ನಾವು ಡೈವರ್ಟ್ ಮಾಡತಕ್ಕದ್ದು ಅಥವಾ ಈ ಮೇಲೆ ತಾವು ಏನು ಹೇಳಿದ್ದೀರಿ, ಕಡವಿನಕಟ್ಟೆಗೆ, ಬೇಕಾದರೆ ಇದನ್ನು ಸ್ಥಳಾಂತರ ಮಾಡತಕ್ಕದ್ದನ್ನು ನಾವು ಮಾಡಬಹುದು.

ಶ್ರೀ ಶಿವಾನಂದ ನಾಯಕ್:– ಸಾರ್, ಮಾನ್ಯ ಸಚಿವರು ಉತ್ತರ ಕೊಡುವಾಗ ತಾವು ಹೇಳಿದ್ದೀರಿ. ಹೆಚ್ಚಿನ ಭೂಮಿಗೆ ನೀರು ಉಣಿಸುವುದರಿಂದ ನೀರಿನ ಕೊರತೆ ಆಗುತ್ತದೆ ಎಂದು ಹೇಳಿದ್ದೀರಿ. ಆ ರೀತಿ ಸಮಸ್ಯೆ ಅಲ್ಲಿ ಇಲ್ಲ. ಅಲ್ಲಿರುವುದು ಅಂದರೆ ಹೂಳು ತುಂಬಿದೆ. ಪೂರ್ತಿ ಬಾಂದಾರದಲ್ಲಿ ಹೂಳು ತುಂಬಿದೆ. ಇವತ್ತು ಸಾಕಷ್ಟು ನೀರು ಹರಿದು ಬರುತ್ತಿದೆ. ನೀರು ಬಾಂದಾರದ ಮೇಲಿಂದ ಪಾಸಾಗಿ ಹೋಗುತ್ತಿರುವುದನ್ನು ಬಿಟ್ಟರೆ ನೀರಿನ ಕೊರತೆ ಇಲ್ಲ. ನೀರು ಸಾಕಷ್ಟು ಇದೆ. ಅಲ್ಲಿ ಕಾಲುವೆ ಒಡೆದು ಹೋಗಿದೆ. ಹೂಳು ಎತ್ತುವ ಕೆಲಸ ಆಗಬೇಕು. ಅದು ಆದರೆ ನಮಗೆ ಆ ರೈತರಿಗೆ ನೀರು ಕೊಡಲಿಕ್ಕೆ ಸಾಧ್ಯವಾಗುತ್ತದೆ. ತಾವು ಹೇಳಿದ ಹಾಗೆ 700 ಎಕರೆ ಅಲ್ಲ. ಅಲ್ಲಿ 25 ಎಕರೆಗೂ ಸಹ ನೀರು ಉಣಿಸುವಂತಹ ಪರಿಸ್ಥಿತಿ ಇವತ್ತು ಇಲ್ಲ. ಆದರೆ ರೈತರು ಅದನ್ನೇ ನಂಬಿಕೊಂಡು ಇದ್ದಾರೆ. ಪ್ರತಿ ವರ್ಷ ಅಲ್ಲಿ ರೈತರು ಬೀಜ ಬಿತ್ತುತ್ತಾರೆ. ಬೀಜ ಬಿತ್ತಿದ ನಂತರ ಮಧ್ಯದಲ್ಲಿ ಬೆಳೆ ಹಾಳಾಗುತ್ತದೆ. ಅದರ ಜೊತೆಗೆ ತಾವು ಮಂಕಿ ಏತ ನೀರಾವರಿ ಬಗ್ಗೆ ಹೇಳಿದಿರಿ. ಅಲ್ಲಿ ಅರಣ್ಯ ಮಧ್ಯದಲ್ಲಿ ಹೋಗುತ್ತಿಲ್ಲ. ಅಲ್ಲಿ ಖಾಲಿ ಗುಡ್ಡ ಇದೆ. ಬಯಲು ಪ್ರದೇಶ. ಅದು ಅರಣ್ಯ ಭೂಮಿ ಹೌದು. ಆದರೆ ಅದು ಕಲ್ಲು ಬಂಡೆ ಇರುವುದರಿಂದ ಅಲ್ಲಿ ಯಾವುದೇ ರೀತಿ ಅರಣ್ಯ ನಾಶ ಆಗುವುದಿಲ್ಲ. ಅರಣ್ಯ ಸಂಪತ್ತು ಹಾಳಾಗುವುದಿಲ್ಲ. ಆದ್ದರಿಂದ ಆ ಯೋಜನೆಯಿಂದ ಮೂರು ಪಂಚಾಯತಿಗೆ ಅನುಕೂಲ ಆಗುವಂತಹದು. ಆದರೆ ನಮ್ಮಲ್ಲಿ ಏನಾಗಿದೆ ಅಂದರೆ ಅಂತರ್ಜಲ ಕುಸಿದು ಹೋಗಿದೆ. ಅಲ್ಲಿ ಬಾವಿ ತೋಡಿದರೆ ಕುಡಿಯುವ ನೀರಿನ ಸಮಸ್ಯೆ, ಉಪ್ಪು ನೀರು ಬರುತ್ತಿದೆ. ಅದ್ದರಿಂದ ಈ ಒಂದು ಯೋಜನೆಯನ್ನು ಕೈಗೆತ್ತಿಕೊಂಡರೆ ಕುಡಿಯುವ ನೀರಿಗೂ ಅನುಕೂಲ ಆಗುತ್ತದೆ ಮತ್ತು 2000 ಎಕರೆ ಜಮೀನಿಗೆ ನೀರಾವರಿಯನ್ನು ಮಾಡಲಿಕ್ಕೂ ಆಗುತ್ತದೆ. ದಯಮಾಡಿ ಆ ಯೋಜನೆಗೆ ತಾವು ಇವತ್ತು ಹೆಚ್ಚು ಒತ್ತು ಕೊಡಬೇಕು ಮತ್ತು ಅರಣ್ಯ ಇಲಾಖೆಯವರನ್ನು ಸಹ ನಾವು ಖುದ್ದಾಗಿ ಭೇಟಿ ಆಗಿದ್ದೇವೆ. ಅವರಿಗೂ ಸಹ ಮನದಟ್ಟು ಮಾಡಬೇಕಾಗಿದೆ. ಸರ್ಕಾರ ಆ ನಿಟ್ಟಿನಲ್ಲಿ ಪ್ರಯತ್ನ ಮಾಡಿ ಅರಣ್ಯ ಇಲಾಖೆಯ ಮೇಲೂ ಒತ್ತು ತರಬೇಕಾಗಿದೆ. ಅಲ್ಲಿ ಯಾವುದೇ ರೀತಿಯ ಅರಣ್ಯ ನಾಶ ಆಗುತ್ತಿಲ್ಲ. ಗಿಡ ಕಡಿಯುವಂತಹ ಪರಿಸ್ಥಿತಿಯೂ ಬರುವುದಿಲ್ಲ. ಆದ್ದರಿಂದ ಎರಡೂ ಯೋಜನೆಗಳನ್ನು ಕೈಗೆ ಎತ್ತಿಕೊಳ್ಳಬೇಕು ಮತ್ತು ಈ ಹೂಳು ಎತ್ತುವಂತಹ ಕೆಲಸವನ್ನು, ಭಟ್ಕಳ ಬಾಂದಾರ್‌ನಿಂದ ಹೂಳು ಎತ್ತುವಂತಹ ಕೆಲಸವನ್ನು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ:– ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೇಳಿದ್ದೇನೆ. ಹೂಳು ಎತ್ತತಕ್ಕಂಥ ಕಾರ್ಯಕ್ರಮಕ್ಕೆ ಬಜೆಟ್ ಪ್ರಾವಿಜನ್ ಇಲ್ಲದೇ ಮಾಡುವುದಕ್ಕೆ ಆಗುವುದಿಲ್ಲ. ಮತ್ತು

ಹೂಳು ಎತ್ತತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡರೆ ಅದಕ್ಕೆ ಕೋಟ್ಯಾಂತರ ರೂಪಾಯಿ ಬೇಕು. ಬಜೆಟ್ ಪ್ರಾವಿಜನ್ ಇಲ್ಲದೆ ಯಾವುದೇ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕಾಗಿ ಅವರಿಗೆ ನಾವು ಹೇಳಿದ್ದು. ನಬಾರ್ಡ್‌ನಲ್ಲಿ ಮುಂದೆ ಬಂದರೆ ಇದಕ್ಕೆ ಏನಾದರೂ ಹಣವನ್ನು ಇಟ್ಟು ತೆಗೆದುಕೊಳ್ಳೋಣ ಎನ್ನತಕ್ಕದ್ದನ್ನು ಹೇಳಿದೆ. ಈ ಮಂಕಿ ಏತ ನೀರಾವರಿ ಬಗ್ಗೆನೂ ಕೂಡ ಅವರು ಹೇಳಿದರು. ಇಲ್ಲ ಅದು ಫಾರೆಸ್ಟ್‌ಗೆ ಹೋಗುವುದಿಲ್ಲವೆಂದು ಹೇಳಿದರು. ಬೇಕಾದರೆ ಕ್ವೊಶ್ಚನ್ ಅವರ್ ಮುಗಿದ ಮೇಲೆ ತಾವು ಬಂದರೆ ನಮ್ಮ ಅಧಿಕಾರಿಗಳು ಇದ್ದಾರೆ. ಅವರ ಜೊತೆ ಮಾತನಾಡಿ ಅವರಿಗೂ ನಾನು ಹೇಳುತ್ತೇನೆ. ಒಂದು ವೇಳೆ ಫಾರೆಸ್ಟ್‌ನಲ್ಲಿ ಇಲ್ಲ. ನೇರವಾಗಿ ಪೈಪ್‌ಲೈನ್ ಹೋಗುತ್ತಿತ್ತು ಎಂದರೆ ನಮ್ಮದೇನೂ ಅಭ್ಯಂತರ ಇಲ್ಲ. ತಾವು ಹೇಳಿದ ಮೇಲೆ ಈಗಾಗಲೇ ಅದಕ್ಕೆ ಒಂದು ಕೋಟಿ ರೂಪಾಯಿ ಇಟ್ಟಿದ್ದೇವೆ. ಅದಕ್ಕಾಗಿ ಬೇಕಾದರೆ ಬನ್ನಿ ಚರ್ಚೆ ಮಾಡೋಣ.

ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆ

225 (2510) ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ): – ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಇಂದಿನ ಜನಸಂಖ್ಯೆ ಎಷ್ಟು;

ಆ) ಬೆಂಗಳೂರು ನಗರದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಹಾಗೂ ಇತರ ಖಾಸಗಿ ಬಡಾವಣೆಗಳು ಹೆಚ್ಚಾಗಿ ಬರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬೆಳೆಯುತ್ತಿರುವ ಜನಸಂಖ್ಯೆಗೆ ಕುಡಿಯುವ ನೀರು ಒದಗಿಸಲು ಸರ್ಕಾರದ ಕೈಗೊಂಡ ಕ್ರಮಗಳೇನು;

ಈ) ಬೆಂಗಳೂರು ಸುತ್ತಮುತ್ತ ಇರತಕ್ಕ ಸಿ.ಎಂ.ಸಿ. ವ್ಯಾಪ್ತಿಯಲ್ಲೂ ಸಹ ನೂರಾರು ಅಪಾರ್ಟ್‌ಮೆಂಟ್ಸ್‌ಗಳು ತಲೆಯೆತ್ತುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಈ ಹಿನ್ನೆಲೆಯಲ್ಲಿ ಬೆಂಗಳೂರಿನ ನಾಗರೀಕರಿಗೆ ಹಾಗೂ ಇಲ್ಲಿ ನಿರ್ಮಿಸುತ್ತಿರುವ ಬಡಾವಣೆಗಳಿಗೆ ಕುಡಿಯುವ ನೀರು ಒದಗಿಸಲು ಹಮ್ಮಿಕೊಂಡಿರುವ ಯೋಜನೆಗಳು ಯಾವುವು;

ಊ) ಇನ್ನು ಕೆಲವೇ ವರ್ಷಗಳ ನಂತರ ನೀರಿನ ಹಾಹಾಕಾರ ತಲೆದೋರುವ ಸಂಭವವಿರುವುದರಿಂದ, ಕೂಡಲೇ ಕಾವೇರಿ ನೀರನ್ನು ಕುಡಿಯಲು ಮಾತ್ರ ಉಪಯೋಗಿಸಲು ಹಾಗೂ ಮಳೆ ನೀರು ಸಂಗ್ರಹಿಸುವುದನ್ನು ವ್ಯಾಪಕವಾಗಿ ಜಾರಿಗೆ ತರಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) 2001ರ ಜನಗಣತಿಯ ಪ್ರಕಾರ ಬೆಂಗಳೂರು ನಗರದ ಜನಸಂಖ್ಯೆ 41,92,223. ಈಗಿನ ಜನಸಂಖ್ಯೆ ಸುಮಾರು 70 ಲಕ್ಷ ಇರಬಹುದೆಂದು ಒಂದು ಅಂದಾಜು.